9. ವಿದ್ಯುತ್ ಖರೀದಿ ಒಪ್ಪಂದವನ್ನು ಮೆ: ಕೊಜೆಂಟ್ರಿಕ್ಸ್, ಯುಎಸ್ಎರವರ ಜೊತೆ ಮಾಡಲಾಗಿದೆ. ವಿದ್ಯುತ್ ವೆಚ್ಚ ಸೀಲಿಂಗ್ ವಿಮಿಟನ್ನು ಖರೀದಿ ಒಪ್ಪಂದದಲ್ಲಿ ರೂ. 4387.48 ಕೋಟಿಗಳಿಗೆ ದಿನಾಂಕ 1-1-97ಕ್ಕೆ ನಮೋದಿಸಲಾಗಿದೆ. ವಿದ್ಯುತ್ ಯೋಜನೆಗಳ ವೆಚ್ಚವನ್ನು ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದೊಡನೆ ಸಮಾಲೋಚಿಸಿ ತೀರ್ಮಾನಿಸಲಾಗುವುದು. ಇತರ ಮೂರು ಫರ್ಮಗಳಿಗೆ ಸಂಬಂಧಿಸಿದ ವಿದ್ಯುತ್ ಖರೀದಿ ಒಪ್ಪಂದ ಯೋಜನಾ ವೆಚ್ಚ ಇತ್ಯಾದಿಯ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಯೋಜನೆಗಳಿಂದ ಅಂದಾಜುಮಾಡಲಾದ ವಿದ್ಯುತ್ ಉತ್ಪಾದನೆ 2600 ಮೆಗಾವಾಟ್‌ಗಳು.

## ವಿಷಯ :- ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಒಪ್ಪಂದ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ69(447)

ಶ್ರೀ. ಹೆಚ್.ಎನ್. ನಂಜೇಗೌಡ (ಬಸವನಗೂಡಿ)

ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ವಿದ್ಯುತ್ ಯೋಜನೆ ಪ್ರವಾಸೋದ್ಯಮ ಮತ್ತು ಇಂಥಹ ವಿಷಯಗಳಲ್ಲಿ ಮಲ್ಟಿನ್ಯಾಷನಲ್ ಸಂಸ್ಥೆಗಳೊಡನೆ ಒಪ್ಪಂದ ಮಾಡಿಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಎಷ್ಟು ಸಂಸ್ಥೆಗಳೊಡನೆ?

ಆ) ಈ ಮಲ್ಟಿ ನ್ಯಾಷನಲ್ ಸಂಸ್ಥೆಗಳ ಹೆಸರು, ಜಲ ಹಾಗೂ ಶಾಖೋತ್ಪನ್ನ ವಿದ್ಯುತ್ ಯೋಜನೆಗಳ ವಿವರ, ಅದರ ಖರ್ಚಿನೊಂದಿಗೆ ಉತ್ಪನ್ನ ಮತ್ತು ಈ ಯೊಜನೆಗಳನ್ನು ಆರಂಭ ಮಾಡುವ ಹಾಗೂ ಮುಕ್ತಾಯಗೊಳ್ಳುವ ವಿವರಗಳನ್ನು ನೀಡತಕ್ಕದ್ದು.

ಇ) ಈ ಯೋಜನೆಗಳಿಂದ ರಾಜ್ಯದ ಬಂಡವಾಳ ಪಾಲು ಮತ್ತು ಹೊರೆಯ ಪ್ರಮಾಣ ತಿಳಿಸುವುದು.

**ಶ್ರೀ. ಜೆ.ಹೆಚ್. ಪಟೇಲ್**
**(ಉಪ ಮುಖ್ಯಮಂತ್ರಿಗಳು)**

ಅ) ಹೌದು. 4 ವಿದೇಶಿ ಸಂಸ್ಥೆಗಳೊಡನೆ ಒಡಂಬಡಿಕೆಗಳನ್ನು ಮಾಡಿರುವುದನ್ನು ಅನುಸರಿಸಲಾಗುತ್ತಿದೆ.

ಆ) ವಿದೇಶಿ ಸಂಸ್ಥೆಗಳೊಡನೆ ಮಾಡಿಕೊಂಡಿರುವ ಒಡಂಬಡಿಕೆಗಳನ್ನು ಅನುಸರಿಸುತ್ತಿರುವ ವಿದ್ಯುತ್ ಯೋಜನೆಗಳ ವಿವರಗಳು ಈ ಕೆಳಕಂಡಂತಿವೆ. (ಅ) ಕೋಜೆಂಟ್ರಿಕ್ಸ್ ಯು.ಎಸ್.ಎ. 1000 ಮೆ.ವಾ. ಶಾಖೋತ್ಪನ್ನ ವಿದ್ಯುತ್ ಕೇಂದ್ರ, ಮಂಗಳೂರು (ಅ) ಹೆಚ್.ಓ.ಕೆ. ಇಂಟರ್‌ನ್ಯಾಷನಲ್, ಯು.ಎಸ್.ಎ. 500 ಮೆ.ವಾ. ಶಾಖೋತ್ಪನ್ನ ವಿದ್ಯುತ್ ಕೇಂದ್ರ, ಹೊಸಪೇಟೆ. (ಇ) ಟ್ಯಾಪ್ಕೊ, ಯು.ಎಸ್.ಎ. 600 ಮೆ. ವಾ.ಜಲ ವಿದ್ಯುತ್ ಕೇಂದ್ರ, ಅಲಮಟ್ಟಿ ಅಣೆಕಟ್ಟು (ಮೊದಲನೇ ಹಂತ). (ಈ) ಪಬ್ಲಿಕ್ ಪವರ್ ಇಂಟರ್‌ನ್ಯಾಷನಲ್, ಯು.ಎಸ್.ಎ. 2250 ಮೆ.ವಾ. ಶಾಖೋತ್ಪನ್ನ ವಿದ್ಯುತ್ ಕೇಂದ್ರ, ರಾಯಚೂರು (5 ಮತ್ತು 6ನೇ ಘಟಕ).

ವಿದ್ಯುತ್ ಖರೀದಿ ಒಪ್ಪಂದವನ್ನು ಮೆ: ಕೋಜೆಂಟ್ರಿಕ್ಸ್

ಯು.ಎಸ್.ಎ. ರವರ ಜೊತೆ ಮಾಡಲಾಗಿದೆ. ವಿದ್ಯುತ್ ವೆಚ್ಚದ ಸೀಲಿಂಗ್ ಲಿಮಿಟನ್ನು ಖರೀದಿ ಒಪ್ಪಂದದಲ್ಲಿ ರೂ: 4387.48 ಕೋಟಿಗಳಿಗೆ ತಾ: 1-1-97ಕ್ಕೆ ನಮೂದಿಸಲಾಗಿದೆ. ಈ ವಿದ್ಯುತ್ ಯೋಜನೆಗಳ ವೆಚ್ಚವನ್ನು ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರದ ಸಲಹೆಯೊಂದಿಗೆ ಅನುಮೋಧಿಸಲಾಗುವುದು. ವಿದೇಶಿ ಸಂಸ್ಥೆಗಳೊಂದಿಗೆ ಒಡಂಬಡಿಕೆಗಳನ್ನು ಮಾಡಿಕೊಂಡು ಮುಂದುವರಿಸುತ್ತಿರುವ ಇತರೆ ವಿದ್ಯುತ್ ಯೋಜನೆಗಳ ವಿದ್ಯುಚ್ಛಕ್ತಿ ಖರೀದಿ ಒಪ್ಪಂದ ವೆಚ್ಚ ಮುಂತಾದ ವಿಷಯಗಳು ಚರ್ಚೆಯಲ್ಲಿವೆ.

:ಮೆ: ಕೋಜೆಂಟ್ರಿಕ್ಸ್, ಹೆಚ್.ಓ.ಕೆ. ಇಂಟರ್‌ನ್ಯಾಷನಲ್ ಮತ್ತು ಪಬ್ಲಿಕ್ ಪವರ್ ಇಂಟರ್‌ನ್ಯಾಷನಲ್ ಇವರು ಕೈಗೊಳ್ಳುತ್ತಿರುವ ವಿದ್ಯುತ್ ಯೋಜನೆಗಳ ವೆಚ್ಚವನ್ನು ಆಯಾ ಕಂಪನಿಗಳೇ ಭರಿಸತಕ್ಕದ್ದು. ಅಲ್ಪಮಟ್ಟಿ ಅಣಿಕಟ್ಟಿನಲ್ಲಿ ಕೈಗೊಳ್ಳುತ್ತಿರುವ ಜಲ ವಿದ್ಯುತ್ ಯೋಜನೆಗಳಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಸಹಭಾಗಿತ್ವವು ಸುಮಾರು 30 ಕೋಟಿ ರೂ.ಗಳು.

**ಶ್ರೀ ವಾಟಾಳ್ ನಾಗರಾಜ್:-** ಮಾನ್ಯ ಅಧ್ಯಕ್ಷರೇ ಈ ನಾಲ್ಕು ಕಂಪನಿಗಳು ಯಾವಾಗ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಪ್ರಾರಂಭ ಮಾಡುತ್ತವೆ? ಇದರಲ್ಲಿ ಉತ್ಪಾದನೆ ಆದಂತಹ ವಿದ್ಯುಚ್ಛಕ್ತಿಯನ್ನು ಯಾವ ದರದಲ್ಲಿ ತಾವು ಮಾಡಬೇಕೆಂದಿದ್ದೀರಿ? ವಿದ್ಯುಚ್ಛಕ್ತಿಯನ್ನು ಅವರಿಂದ ಸರ್ಕಾರಕ್ಕೆ ಕೊಂಡುಕೊಂಡು ಗ್ರಾಹಕರಿಗೆ ಮಾರುತ್ತೀರಾ? ಅಥವಾ ನೇರವಾಗಿ ಅವರೇ ಗ್ರಾಹಕರಿಗೆ ಮಾರುತ್ತಾರೆಯೇ? ಈ ನಾಲ್ಕು ಕಂಪನಿಗಳಿಗೆ ಯಾವ ಯಾವ ಸವಲತ್ತುಗಳು ಒದಗಿಸಿದ್ದೀರಿ? ಎಲ್ಲಿ ಸ್ಥಳ ಕೊಟ್ಟಿದ್ದೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು.

+ ಶ್ರೀ ಜೆ.ಹೆಚ್.ಪಟೇಲ್ ಮಾನ್ಯ ಅಧ್ಯಕ್ಷರೇ ವಾಸ್ತವವಾಗಿ ನಾವು ಒಪ್ಪಂದವನ್ನು ಕರಾರುವಕ್ಕಾಗಿ ಮಾಡಿಕೊಂಡು ಪವರ್ ಪ್ರಾಜೆಕ್ಟ್ ಅಗ್ರಿಮೆಂಟ್ ಮಾಡಿಕೊಂಡಿರುವುದು ಒಂದೇ ಒಂದು ಕಂಪನಿಯ ಜೊತೆ. 1998-99ನೇ ಇಸವಿಯೊಳಗೆ ಪ್ರಾಜೆಕ್ಟ್ ಕಂಪ್ಲೀಟ್ ಆದ ಮೇಲೆ ಇಂತಹ ರೇಟಿಗೆ ನಾವು ಕೊಂಡು ಕೊಳ್ಳಲಿಕ್ಕೆ ತಯಾರಿದ್ದೇವೆಂದು ಹೇಳಬಹುದು. ಈಗ ಯೂನಿಟ್ ಒಂದಕ್ಕೆ ರೂ. 2.50ಕ್ಕೆ ಕೊಂಡುಕೊಳ್ಳುತ್ತೇವೆ ಎಂಬುದಾಗಿ ಅಗ್ರಿಮೆಂಟ್ ಮಾಡಿಕೊಂಡಿದ್ದೇವೆ. ಇನ್ನು ಉಳಿದ ನಾಲ್ಕು ಕಂಪನಿಗಳು ಅಂದರೆ ಕೊಜೆಂಟ್ರಿಕ್ಸ್ ಸ್ಥಳ ಮಂಗಳೂರು. ಮೆ: ಹಾಕ್ ಇಂಟರ್‌ನ್ಯಾಷನಲ್ ಅವರು ಕೇಳಿರುವುದು ಸಹ ಮಂಗಳೂರು. ಮೆ.ಪಿ.ಪಿ.ಐ ಸ್ಥಳ ಇನ್ನೂ ನಿಗದಿ ಆಗಿಲ್ಲ. ಟ್ಯಾಪೆಕೋ ಕಂಪನಿಯವರು ಕೇಳಿರುವುದು ಅಲಮಟ್ಟಿ. 600 ಮೆಗಾವ್ಯಾಟ್ ಜಲವಿದ್ಯುತ್ ಇದೆ. ಆದರೆ ಅದು ಇನ್ನೂ ಅಗ್ರಿಮೆಂಟ್ ಆಗಿಲ್ಲ. ಇದರ ಜೊತೆಗೆ ಮಾನ್ಯ ಸದಸ್ಯರಿಗೆ ಕೊಟ್ಟಿರುವ ಉತ್ತರಕ್ಕಿಂತ ಹೆಚ್ಚಾಗಿ ನನ್ನ ಗಮನದಲ್ಲಿರುವುದನ್ನು ಸದನಕ್ಕೆ ಹೇಳಬಾರದು. ಆದರೂ ಸಹ ನಾನು ಒಂದು ಪಟ್ಟಿ ಮಾಡಿದ್ದೇನೆ. ಆ ಪಟ್ಟಿ ಪ್ರಕಾರ 1000 ಮೆಗಾವ್ಯಾಟ್ ಕೊಜೆಂಟ್ರಿಕ್ಸ್. ಅದೂ ಅಲ್ಲದೆ ಕಂಪನಿಗಳ ಹೆಸರು, ಸ್ಥಳ ಏತಕ್ಕೆ ಹೇಳುತ್ತಿಲ್ಲ ಎಂದರೆ ಪವರ್ ಪ್ರಾಜೆಕ್ಟ್ ಅಗ್ರಿಮೆಂಟ್ ಮಾಡಿಕೊಳ್ಳುವುದಕ್ಕೆ ಮುಂಚೆ ಹೆಸರು ಹೇಳುವುದರಲ್ಲಿ

ಅರ್ಥ ಇಲ್ಲ, ಅದುತಪ್ಪಾಗುತ್ತದೆ. ಈಗ ನಾಲ್ಕು ಕಂಪನಿಗಳದ್ದು ಹೇಳಿದ್ದೇನೆ. ಅವುಗಳದ್ದು ಪವರ್ ಪ್ರಾಜೆಕ್ಟ್ ಅಗ್ರಿಮೆಂಟ್ ಆಗಿಲ್ಲ. ಯಾವುದೇ ಪವರ್ ಅಗ್ರಿಮೆಂಟ್ ಆಗಿ ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿ ಕ್ಲಿಯರ್ ಮಾಡದೇ ಇದ್ದರೆ ಎಂ.ಓ.ಯು.ಗೆ ಅರ್ಥ ಇಲ್ಲ. ಅದು ಆರ್ಡರ್ ಅಲ್ಲ. ಟರ್ಮ್ಸ್ ಅಂಡ್ ಕಂಡೀಷನ್ಸ್ ಮೇಲೆ ಎಷ್ಟು ಮೆಗಾವ್ಯಾಟ್ ಉತ್ಪಾದನೆ ಮಾಡಬೇಕು ಎನ್ನುವುದು ಇರುತ್ತದೆ. ಕಲ್ಲಿದ್ದಲು, ಡೀಸಲ್ ಜಲವಿದ್ಯುತ್ ಈ ರೀತಿ ಬೇರೆ ಬೇರೆ ಕ್ಯಾಟಗರಿಯಲ್ಲಿರತಕ್ಕ ಪ್ರಾಜೆಕ್ಟ್‌ಗಳ ಬಗ್ಗೆ ಎಂ.ಓ.ಯು. ಬರೀ ಒಡಂಬಡಿಕೆ ಅಷ್ಟೇ. ಆ ದೃಷ್ಟಿಯಿಂದ ಈಗ ಒಪ್ಪಂದವಾಗಿರುವುದು 1000 ಮೆಗಾವ್ಯಾಟ್ಸ್‌ಗೆ. ಒಪ್ಪಂದ ಆಗಬೇಕಾಗಿರುವುದು 1000 ಮೆಗಾವ್ಯಾಟ್ ಹೊಸಪೇಟೆಯಲ್ಲಿ. 15000 ಮೆಗಾವ್ಯಾಟ್ ಮೈಸೂರಿನಲ್ಲಿ. 600 ಮೆಗಾವ್ಯಾಟ್ ಡೀಸಲ್ ಸೆಟ್ ಇನ್ 5 ಪ್ಲೇಸಸ್ ಇನ್ ಕರ್ನಾಟಕ. ಸೂಪರ್ ಥರ್ಮಲ್ ಪವರ್ ಸ್ಟೇಷನ್ ಕೊಡಬೇಕೆಂದು ರಷ್ಯಾದವರೊಡನೆ ಒಂದು ಒಪ್ಪಂದ ಮಾಡಿದ್ದು, ಆ ಒಪ್ಪಂದ ಇನ್ನೂ ಜಾರಿ ಆಗಿಲ್ಲ. ಆ ಕಾರಣದಿಂದ ಇದನ್ನು ಮಾಡುತ್ತಿದ್ದೇವೆ. ಕೊಜೆಂಟ್ರಿಕ್ಸ್ 1000 ಮೆಗಾವ್ಯಾಟ್ಸ್ ಬಿಟ್ಟರೆ 5800 ಮೆಗಾವ್ಯಾಟ್ ಉತ್ಪಾದನೆಯನ್ನು ಮಾಡುವುದಕ್ಕೆ ಕಂಪನಿಗಳು ಬಂದಿದ್ದವು. ಅದರೊಳಗೆ ಎಂ.ಓ.ಯು. ಇರತಕ್ಕೆ ಮತ್ತು ಇಲ್ಲದೇ ಇರತಕ್ಕೆ ಕಂಪನಿಗಳು ಇದ್ದವು. ಎಂ.ಓ.ಯು. ರಿನ್ಯೂ ಮಾಡಿಕೊಂಡಿದ್ದಾರೆ. 1997ಕ್ಕೆ ಎಷ್ಟು ಪವರ್ ಜನರೇಟ್ ಆಗುತ್ತದೆ. 1999ಕ್ಕೆ ಎಷ್ಟಾಗುತ್ತದೆ ನೋಡಬೇಕಾಗುತ್ತದೆ. ಈಗನಮ್ಮದೇ ಅದಂತಹ ಸರ್ಕಾರದ ಕೈಯಲ್ಲಿ ಇರತಕ್ಕೆ ಪ್ರಾಜೆಕ್ಟ್ ರಾಯಚೂರಿನಲ್ಲಿ ಐದು ಮತ್ತು ಆರನೇ ಯೂನಿಟ್ ಇದೆ. ರಾಯಚೂರು 5-6 ಪ್ರಾಜೆಕ್ಟ್ ಪೈಕಿ ಕಾಟ್ಸಾ, ಕೊಡಸಳ್ಳಿ ಬರುತ್ತದೆ. ಯಲಹಂಕ 1000 ಮೆಗಾವ್ಯಾಟ್ ಡೀಸಲ್ ಇದೆ. ಅದನ್ನು ಎಕ್ಸ್‌ಪ್ಯಾಂಡ್ ಮಾಡಬಹುದು. ಡೀಸಲ್ ಸೆಟ್ಸ್ ಒಂದೂವರೆ ವರ್ಷಕ್ಕೆ ಪವರ್ ಕೊಡಬಲ್ಲವು. ಡೀಸಲ್ ಪವರ್ ಹೆಚ್ಚು ಕಾಸ್ಟ್ ಆಗುತ್ತದೆಂದು ತಜ್ಞರು ಹೇಳುತ್ತಾರೆ. ನಾವು ಇಲ್ಲಿಯವರೆಗೆ ಕೆ.ಇ.ಬಿ.ಕೆಲಸ ಬೇರೆಯವರಿಗೆ ಕೊಟ್ಟಿಲ್ಲ. ಯಾರೇ ಪವರ್ ಜನರೇಟ್ ಮಾಡಿದರೂ ಕೆ.ಇ.ಬಿ. ಮೂಲಕವೇ ಸೇಲ್ ಆಗುತ್ತದೆ. ಅದುದರಿಂದ ನಾವು ಇವೊತ್ತು ಒಂದು ದ್ವಂದ್ವದಲ್ಲಿ ಇದ್ದೇವೆ. ಯಾರು ಪವರ್ ಜನರೇಟ್ ಮಾಡುತ್ತಾರೆ ಅದನ್ನು ಕೊಂಡುಕೊಳ್ಳಲು ತಯಾರು ಇರುವುದರಿಂದ ನೀವು ಹೆಚ್ಚು ಜನರೇಟ್ ಮಾಡಿ, ಇಂತಹ ರೇಂಜ್‌ನಲ್ಲಿ ನಾವು ಕೊಂಡುಕೊಳ್ಳಲು ಸಿದ್ಧ ಎಂಬದನ್ನು ತೀರ್ಮಾನ ಮಾಡಬೇಕಾಗುತ್ತದೆ ಅಥವಾ ಇವೊತ್ತು ರೇಟನ್ನು ನಿಗದಿ ಪಡಿಸಿ ಲಾಭವಾಗಲಿ ಲುಕ್ಸಾನಾಗಲಿ ಅದನ್ನು ಕಸ್ಟೂಮರ್ಸ್‌ಗೆ ಮಾರಬೇಕಾಗುತ್ತದೆ. ಈ ಬಗ್ಗೆ ಪಾಲಿಸಿ ತೀರ್ಮಾನ ಇನ್ನೂ ಮಾಡಿಲ್ಲ. ಪ್ರವೇಟ್‌ನವರಿಗೆ ನೀವೇ ಮಾಡಿಕೊಳ್ಳಿ ಎಂದು ಇಲ್ಲಿಯವರೆಗೆ ಹೇಳಿಲ್ಲ. ಈಗ ಇರುವುದು ಮೂರು ಸಾವಿರ ಮೇಗಾವ್ಯಟ್ ಹಾಗೂ ಸಣ್ಣಪುಟ್ಟ ಹೈಡಲ್‌ಗಳಿಂದ 3 ರಿಂದ 4 ಸಾವಿರ ಮೆಗಾವ್ಯಾಟ್ ಉತ್ಪಾದನೆಯಾಗುತ್ತದೆ. ಇದನ್ನು ಕೆ.ಇ.ಬಿ.ಗೆ ಕೊಡುತ್ತಿದ್ದೇವೆ. ಕೆ.ಇ.ಬಿ.ನವರು ಗ್ರಾಹಕರಿಗೆ ಕೊಡುತ್ತಿದ್ದಾರೆ. ನಾವು ಸ್ವಲ್ಪ ಕಮೀಷನ್ ಪಡೆದುಕೊಳ್ಳುತ್ತಿದ್ದೇವೆ. ಅಂದರೆ ಸುಮಾರು ಏಳು ಸಾವಿರ ಮೆಗಾವ್ಯಾಟ್ ಪವರ್‌ನ್ನು ನಾವು ಇವೊತ್ತು ಉತ್ಪಾದನೆ ಮಾಡುತ್ತಿದ್ದೇವೆ. ಆದುದರಿಂದ ಡಿಸ್ಟ್ರಿಬ್ಯೂಷನ್ ಸಿಸ್ಟಮ್ ಮತ್ತೊಂದು ಇಂಪ್ರೂವ್ ಮಾಡದೇಹೋದರೆ ಏನೂ ಪ್ರಯೋಜನ ಆಗುವುದಿಲ್ಲ. ಬರೀ ಜನರೇಟ್ ಮಾಡುವುದರಿಂದ ಏನೂ ಆಗುವುದಿಲ್ಲ. ಒಂದು ಸಾವಿರ ಮೆಗಾವ್ಯಾಟ್ ವಿದ್ಯುತ್ ಜನರೇಟ್ ಮಾಡಬೇಕಾದರೆ.

ಐದು ಸಾವಿರ ಕೋಟಿ ರೂಪಾಯಿ ಆಗುತ್ತದೆ.ಅದು ಕೋಲ್ ಬೇಸ್ಡ ಆದರೆ 4500 ರಿಂದ 5000 ಕೋಟಿ ರೂಪಾಯಿ ಆಗುತ್ತದೆ. ಇಷ್ಟು ಇನ್‌ವೆಸ್ಟ್ ಮಾಡಿ ಒಂದು ಸಾವಿರ ಮೆಗಾವ್ಯಾಟ್ ಜನರೇಟ್ ಮಾಡಿದರೂ ಕನಿಷ್ಟ ಪಕ್ಷ 200 ಕೋಟಿ ರೂಪಾಯಿ ಡಿಸ್ಟ್ರಿಬೂಷನ್‌ಗೆ ಬೇಕು. ಸೈಮಲ್‌ಟೇನಿಯಸ್ ಆಗಿ ಜನರೇಟ್ ಮಾಡಬೇಕು. ಸಿಸ್ಟಮ್ ಇಂಪ್ರೂವಮೆಂಟ್ ಮಾಡಬೇಕು. ಇಲ್ಲದಿದ್ದರೆ ಜನರೇಟ್ ಮಾಡಿದ ಪವರ್ ಯೂಸ್ ಆಗುವುದಿಲ್ಲ. ಆ ಒಂದು ಅನಾಮಲಿ ಇದೆ. ಇವೊತ್ತು ಸರ್ಕಾರ ಜನರೇಟ್ ಮಾಡುವುದಕ್ಕೆ ಎಷ್ಟು ಎನ್‌ಕರೇಜ್ ಮಾಡುತ್ತದೆ. ಅಷ್ಟೇ ಎನ್‌ಕರೇಜಮೆಂಟನ್ನು ಸಿಸ್ಟಮ್ ಇಂಪ್ರೂವಮೆಂಟ್‌ಗೂ ಮಾಡಬೇಕಾಗುತ್ತದೆ. ಈಗಾಗಲೇ ಕೆ.ಇ.ಬಿ.ನವರುಇದಕ್ಕಾಗಿಹಣ ತೊಡಗಿಸಿದ್ದಾರೆ. ಅಂದರೆ ಸುಮಾರು ಎಂಟು ನೂರು ಕೋಟಿ ರೂಪಾಯಿಗಳಷ್ಟು ಹಣ ತೊಡಗಿಸಿದ್ದಾರೆ. ಹೆಚ್ಚಿನ ಕೆಪ್ಯಾಸಿಟಿ ಇರತಕ್ಕ ಸಬ್ ಸ್ಟೇಶನ್‌ಗಳು, ಹೆಚ್ಚಿನ ಕೆಪ್ಯಾಸಿಟಿ ಲೈನ್‌ಗಳನ್ನು ಹಾಕಬೇಕಾಗುತ್ತದೆ. ಡಿಸ್ಟ್ರಿಬೂಶನ್‌ಗೆ ಬೇಕಾದಂತಹ ಬೇರೆ ಬೇರೆ ಕೆಪ್ಯಾಸಿಟರ್‌ಗಳು, ಕಂಡಕ್ಟರ್‌ಗಳು ಈ ತರಹ ಹೊಸ ಹೊಸ ಸಿಸ್ಟವಮಿಂಪ್ರೂವಮೆಂಟ್ ಸ್ಕೀಮ್‌ಗಳನ್ನು ನಾವು ಇನ್‌ಸ್ಟಾಲ್ ಮಾಡಿಕೊಂಡಿದ್ದೇವೆ. ಜನರೇಟ್ ಬಗ್ಗೆ ನಾವುಖಾಸಗಿ ಯವರಿಗೆ ಒದಗಿಸುತ್ತೇವೆ. ಅದರ ಇವೊತ್ತು ಒಪ್ಪಂದ ಆಗಿರುವುದು ಕೋಜೆಂಟ್ರಿಕ್ಸ್‌ರವ ರೊಂದಿಗೆ. ಇನ್ನೂ ಒಪ್ಪಂದ ಆಗಬೇಕಾಗಿರುವುದು ಇದೆ. ಇನ್ನು ಎರಡು- ಮೂರು ತಿಂಗಳಲ್ಲಿ ಮಾಡುತ್ತೇವೆ. ಇದನ್ನು ಬಹಳ ದೂರ ತೆಗೆದುಕೊಂಡು ಹೋಗಲು ಆಗುವುದಿಲ್ಲ. ಇನ್ನೂ ಒಂದು ತಿಂಗಳಲ್ಲಿ ಇದನ್ನೆಲ್ಲಾ ಕ್ಲೀಯರ್ ಮಾಡಿ ಅವರಿಂದ ಎಲ್ಲಾ ಕೆಲಸ ತೆಗೆದು ಕೊಳ್ಳುತ್ತೇವೆ.

**ಅಧ್ಯಕ್ಷರು:-** ಶ್ರೀ ಬಂಗಾರಪ್ಪನವರೂ, ವಿರೋಧ ಪಕ್ಷದ ನಾಯಕರು ಶ್ರೀ ಶ್ರೀರಾಮ ರೆಡ್ಡಿಯವರು ಉಪ ಪ್ರಶ್ನೆಗಳನ್ನು ಕೇಳಲು ತಯಾರಿದ್ದಾರೆ. ಆದರೆ ಮೂಲ ಪ್ರಶ್ನೆಯನ್ನು ಹಾಕಿರುವವರು ಇನ್ನೂ ಉಪ ಪ್ರಶ್ನೆಯನ್ನು ಕೇಳಿಲ್ಲ. ಇದು ಗಂಭೀರವಾದ ವಿಷಯ ಆಗಿರುವುದರಿಂದಇದನ್ನು ಬಹುಶಃ ಕೊಶ್ಚನ್ ರೂಪದಲ್ಲಿ ಚರ್ಚಿಸಲು ಹಾಗೂ ವೈಡರ್ ಡಿಸ್‌ಕಶ್‌ನ್‌ಗೆ ನಮ್ಮ ಕಾರ್ಯದರ್ಶಿಗಳ ಜೊತೆಯಲ್ಲಿ ಚರ್ಚೆ ಮಾಡಿ ಅರ್ಧ ಗಂಟೆ ಚರ್ಚೆಗೆ ಇದನ್ನು ತೆಗೆದುಕೊಂಡರೆ ಸ್ವಲ್ಪ ದೀರ್ಘವಾದ ಚರ್ಚೆ ಮಾಡಿದಂತೆ ಆಗುತ್ತದೆ ಎಂಬುದು ನನ್ನ ಅಭಿಪ್ರಾಯ.

**ಶ್ರೀ ಹೆಚ್.ಎನ್. ನಂಜೇಗೌಡ:-** ವ್ಯಾಪಕ ಚರ್ಚೆ ಮಾಡತಕ್ಕ ಹಂತಕ್ಕೆ ನಾವು ಇನ್ನೂ ತಲುಪಿಲ್ಲ. ಈ ವಿಷಯದಲ್ಲಿ ವ್ಯಾಪಕ ಚರ್ಚೆ ಮಾಡಬೇಕಾದರೆ ಮಾಸ್ಟರ್ ಪ್ಲ್ಯಾನ್ ತಯಾರು ಮಾಡಬೇಕಾಗಿದೆ. ಏಳು ಸಾವಿರ ಮೆಗಾವ್ಯಾಟ್ ಡಿಸ್ಟ್ರಿಬ್ಯೂಟ್ ಮಾಡಬೇಕಾದರೆ ಸರ್ಕಾರದವರು ಮಾಸ್ಟರ್ ಪ್ಲ್ಯಾನ್ ತಯಾರು ಮಾಡಬೇಕು. ಅವರು ಇನ್ನೂ ತಯಾರು ಮಾಡಿಲ್ಲ.

Production Stage, buying stageand selling stage.

ಯಾವುದಕ್ಕೂ ಪ್ರಪೋಸಲನ್ನು ಅವರು ಇಟ್ಟಿಲ್ಲ. ವ್ಯಾಪಕವಾದ ಚರ್ಚೆಗೆ ಪರಿಕರಣವನ್ನು ಸರ್ಕಾರ ಒದಗಿಸಬೇಕು. ಒಬ್ಬರ ಜೊತೆಯಲ್ಲಿ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಅದುದರಿಂದ

ಒಂದೆರಡು ಉಪ ಪ್ರಶ್ನೆಗಳಿಗೆ ಉತ್ತರ ಹೇಳಿದರೆ ಸಾಕಾಗುತ್ತದೆ. ವ್ಯಪಕವಾದ ಚರ್ಚೆ ಆಗ ಬೇಕಾದರೆ ಅವರು ಪರಿಕರಣವನ್ನು ಒದಗಿಸಬೇಕು. ಈಗ ಕೇವಲ ಒಂದು ಕಂಪನಿಜೊತೆ ಮಾತ್ರ ಅವರು ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. There are three stages. Production stage, buying stage and the final is selling stage. What are the arrangements contemplated by the Government. First stage is, production will be done by some company, next is buying stage and selling stage. I would like to know from the Government, what is the production cost per unit as agreed by the Government, buying price per unit as agreed by the Government and the selling price per unit which the Government is contemplating to fix for the consumers?

Sri J.H. Patel:- We can only say about the possiblilty of generation. ಒಂದು ಸಾವಿರ ಮೆಗಾವ್ಯಾಟ್‌ಗೆ ಕೋಜೆಂಟ್ರಿಕ್ಸ್ ಜೊತೆಯಲ್ಲಿ ಅಗ್ರಿಮೆಂಟ್ ಆಗಿದ್ದು ಅವರು ನಾಳೆ ಕೇಂದ್ರ ಸರ್ಕಾರದಿಂದ ಕ್ಲೀಯರೆನ್ಸ್ ತಂದು ಕೆಲಸ ಶುರು ಮಾಡಿದರೂಸಹ for a plant of that magnitude, that may take a minimum of $3^{1/2}$ to 4 years, if it is coal-based.

ಇದೇ ಕೋಲ್ ಬೇಸ್ಡ್ ಆದರೆ ಅಥವಾ ಡಿಸೇಲ್ ಆದರೆ ಎರಡು ವರ್ಷದಲ್ಲಿ ಮಾಡಬಹುದು. ಇನ್ನು ಹೈಡಲ್‌ನಲ್ಲಿ ನಮ್ಮದು ಒಂದು ಆಲ್‌ಮಟ್ಟಿನಲ್ಲಿ ಇದೆ.ಆದರಿಂದ 600 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಮಾಡಬೇಕಾದರೆ ಐದು ವರ್ಷಗಳಾದರೂ ಬೇಕಾಗುತ್ತದೆ. ಇನ್ನೂ ಎರಡು ವರ್ಷಗಳಾದ ಮೇಲೆಬರತಕ್ಕಂಥ ಪವರನ್ನು ಯಾರಿಗೆ ಸೇಲ್‌ಮಾಡಬೇಕು ಎಂಬುದು ಪ್ರಶ್ನೆ. ಇವೊತ್ತು ಕೆ.ಇ.ಬಿನವರು ಕನ್ಸಿಡರ್ ಮಾಡಿ ಅವರಿಗೆ ಕಾಸ್ಟ್ ಆಫ್ ಪ್ರೊಡಕ್ಷನ್ ಏನು ಇದೆ ಅದನ್ನು ನೋಡಿಕೊಂಡು ಅವರು ನಮಗೆ ಕೋಟ್ ಮಾಡುತ್ತಾರೆ. ಈ ತರಹ ಕೋಜೆಂಟ್ರಿಕ್ಸ್‌ನವರು ಕೊಟ್ ಮಾಡಿರುವುದು ರೂ. 2.50 ಪೈಸೆ ಪರ್ ಯೂನಿಟ್, ಇದನ್ನು ನಾವು ಅವರಿಗೆ ಕೊಡಬೇಕು. ನಾವು ಅದರೆ ಕಡಿಮೆಗೆ ಮಾರುವುದಕ್ಕೆ ಆಗುವುದಿಲ್ಲ.ಈಗಾಗಲೇ ನಮ್ಮ ಕಾಸ್ಟ್ ಆಫ್ ಪ್ರೊಡಕ್ಷನ್ ಪರ್ ಯೂನಿಟ್ ಒಂದು ರೂಪಾಯಿ ಹತ್ತು ಪೈಸೆ ಇದೆ. ಇದು ನಮ್ಮದು ಬೇರೆ ಕಂಪನಿಗಳದ್ದು ಅಲ್ಲ ಒಂದು ರೂಪಾಯಿ ಹತ್ತು ಪೈಸೆ ಕಾಸ್ಟ್ ಆಫ್ ಪ್ರೋಡಕ್ಷನ್ ಇದ್ದರೂ ಸಹ 55 ಪೈಸೆ ಡೊಮಸ್ಟಿಕ್‌ಕನ್ಸೂಮರ್ಸ್‌ರಿಂದ 100 ಪೈಸೆ ಆಲ್ ಎ.ಇ.ಹೆಚ್ ನವರಿಂದ ಚಾರ್ಜ್ ಮಾಡುತ್ತಿದ್ದೇವೆ. ಅಗ್ರಿಕಲ್ಚರ್ ಸೆಕ್ಟಾರ್‌ಗೆ ಫ್ರೀ ಆಗಿ ಕೊಡುತ್ತಿದ್ದಾರೆ. ಆದುದರಿಂದ ನಾವು ಇವೊತ್ತು ಕೆ.ಇ.ಬಿ ಪರಿಸ್ಥಿತಿಯನ್ನುನೋಡಿಕೊಂಡು ಮುಂದೆ ಕ್ರಮಕೈಗೊಳ್ಳಬೇಕಾಗಿದೆ. ಯಾರೂ ದುಬಾರಿಗೆ ತೆಗೆದುಕೊಂಡು ಮಾರಲು ಆಗುವುದಿಲ್ಲ. ಯಾರು ಜಾಸ್ತಿ ಹಣ ಕೊಟ್ಟು ನೇರವಾಗಿ ತೆಗೆದುಕೊಳ್ಳಲು ತಯಾರಿದ್ದರೆ ತೆಗೆದುಕೊಳ್ಳಲ್ಲಿ ಲೈನನ್ನು ಉಪಯೋಗಿಸಿಕೊಳ್ಳಲಿ ನೇರವಾಗಿ ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಿ ನಾವು ಕೆಲವು ಕಂಪನಿಗಳಿಗೆ ಹೇಳುತ್ತಿದ್ದೇವೆ. ಅಂದರೆ ಅವರೇ ಜನರೇಟ್ ಮಾಡಿಕೊಳ್ಳಬೇಕುಹಾಗೂ ಟ್ರಾನ್ಸ್‌ಮಿಟ್ ಮಾಡಿಕೊಳ್ಳಬೇಕು. ಒಂದು ಸಾವಿರದಿಂದ ಒಂದು ಸಾವಿರದ ಐದನೂರು ಮೆಗಾವ್ಯಾಟ್ ಉತ್ಪಾದನೆ ಮಾಡಿ ಅದನ್ನು ಹಂಚಲು ನಮಗೆ ಒಂದು ಸಾವಿರ ಒಂದು ಸಾವಿರದ ಐದನೂರು ಕೋಟಿ ಖರ್ಚಾಗುತ್ತದೆ.

We are coming to terms with this company.

ಇವೊತ್ತು ನಾವು ಕೋಜೆಂಟ್‌ರಕ್ಸ್‌ನವರಿಗೆ ಹೇಳಿರುವುದುಎರಡು ರೂಪಾಯಿ ಐವತ್ತು ಪೈಸೆ ಪರ್ ಯೂನಿಟ್‌ಗೆ ಉಳಿದವರೊಡನೆ ಪವರ್ ಪರ್ಚೇಸ್ ಅಗ್ರಿಮೆಂಟ್ ಆಗಿರುವುದಿಲ್ಲ. I really want this august House to undersatand thereal difficultives that we are undergoing. Otherwise, it is all futile exercise.

ಇದರಲ್ಲಿ ಯಾರನ್ನೋ ಮೆಚ್ಚಿಸಬೇಕೆಂದು ನಾನು ಕ್ರಮ ಕೈಗೊಳ್ಳುತ್ತಿಲ್ಲ. ಇರತಕ್ಕ ವಿಚಾರವನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಇರತಕ್ಕ ಪರಿಸ್ಥಿತಿಯಲ್ಲಿ ಹೇಗೆ ಫಾರ್ಮರ್ಸ್‌ಗೆ ಚಾರ್ಜ್ ಮಾಡಬೇಕು ಎಂದು ಈ ಸದನದಲ್ಲಿ ತಿಳಿಸಿದರೆ ಆ ರೀತಿ ಮಾಡುತ್ತೇವೆ. ನಾನೂ ಕೂಡ ರೈತನ ಮಗ, ಮಾರವಾಡಿ ಮಗ ಅಲ್ಲ. ಪವರ್ ಯೂಸ್ ಮಾಡಿದರೆ ಏನು ಬೆಳೆಯಬಹುದು ಎಂದು ನನಗೂ ಗೊತ್ತಿದೆ. ಶೇಕಡ ನಲವತ್ತರಷ್ಟು ಪವರ್ ಯೂಸ್ ಮಾಡುವುದು ಅಗ್ರಿಕಲ್ಚರ್ ಸೆಕ್ಟರ್. ಹಿಂದೆ ಇದು ಶೇಕಡ ಮೂರರಷ್ಟು ಇತ್ತು. ಆಗಪವರ್ ಪರ್ ಯೂನಿಟ್‌ಗೆ, ಪ್ರತಿಯೊಂದು ಯೂನಿಟ್‌ಗೆ ಹನ್ನರಡು ಪೈಸೆ ಇತ್ತು. Per unit cost was only 12 paise. Now per unit cost is 110 paise. 42% of generation goes free. How do you manage this?

ರೈತರಿಗೆ ಹೇಳಿ, ಬಿಡೋಣ, ಬೇಕಾದರೆ ಇದನ್ನು ಇಟ್ಟುಕೊಳ್ಳಿ, ಇಲ್ಲದಿದ್ದರೆ ಯಾರಿಗಾದರೂ ಕೊಟ್ಟು ಬಿಡೋಣ ಎಂದು ನಮ್ಮ ಕಾಲದಲ್ಲಿ ಇದನ್ನು ನಡೆಸಿಕೊಂಡು ಹೋಗಲು ಆಗದಿದ್ದರೆ ಯಾರಿಗಾದರೂ ವಹಿಸಿ ಬಿಡೋಣ ಆ ರೀತಿ ವಹಿಸಿಕೊಡುವ ಸ್ಥಿತಿಗೆ ನಾವು ಇನ್ನೂ ತಲುಪಿಲ್ಲ. ಅದುದರಿಂದ ಯಾವುದೇ ವಿಷಯವನ್ನ ಈ ಸದನದಲ್ಲಿ ಹೇಳುವಾಗ ಖಚಿತವಾಗಿ ಇದ್ದರಿ ಮಾತ್ರ ಹೇಳಬೇಕು. ಬೇಕಾದರೆ ಇದರ ಬಗ್ಗೆ ಚರ್ಚೆ ಮಾಡೋಣ. ಚರ್ಚೆಗೆ ನಾವು ತಯಾರು ಇದ್ದೇವೆ.

Sri H.N. Nanjegowda I agree with you for having a special discussion not doubt. ಅವರ ಚರ್ಚೆ ಆಗಬೇಕಾದರೆ ನೀವು ಕೆಲವು ಪರಿಕರಣ ಒದಗಿಸಬೇಕು. ಇನ್‌ಫ್ರಾಸ್ಟ್ರಕಚರ್ ಏನು ಬೇಕು In this case, infrastructure does not mean only carrying up to thermal plant. Infrastructure means, when you produce 7000 MW of power in the State, what are your infrastructure to carry this? Have you got a Master Plan? What is the cost of the Master Plan? What will be the ultimate cost? Some experts say, it will not be possible to charge less than Rs. 7/- per unit. People should not be taken by surprise and take it as bolt from blue. Let them supply all these preliminary materials and then we can have a detailed discussion.

ಪವರ್ ಬಗ್ಗೆ ಇಬ್ಬರು ಕೇಳಿದ್ದಾರೆ. ಆದರೆ

ಶ್ರೀ ಜೆ.ಹೆಚ್. ಪಟೇಲ್ ಶ್ರೀ ನಂಜೇಗೌಡರ ಪ್ರಶ್ನೆಯಲ್ಲಿ ಎನಿದೆ ಎಂದರೆ ಟೂರಿಸಂ ಬಗ್ಗೆ ಮಾಡಿಕೊಂಡಿರುವ ಒಪ್ಪಂದ MOU ಬಗ್ಗೆ ಕೆಲವು ವಿವರಗಳನ್ನು ಕೇಳಿದ್ದಾರೆ. M/s. Chesterfield International Private Limited, Singapore. Estimated cost Rs. 400 crores. 5 - Star Hotel complex,. It is a complex of Chesterfield International Pvt. Ltd.,

ಅವರ ಜೊತೆ ಎಂ.ಒ.ಯು ಅಗ್ರಿಮೆಂಟ್ ಆಗಿದೆ. ಇದು ಯಾವುವು ಎಂದರೆ ಬೆಂಗಳೂರು, ಶಿವಮೊಗ್ಗ, ಮೈಸೂರು, ಹಾಸನ ಮತ್ತು ಹಂಪೆ Limousine cores, coches, Luxury touristar etx.. ಬೆಂಗಳೂರಿನಿಂದ ಸರ್ವೀಸ್ ಕೊಡುವುದಕ್ಕೆ 50 ಕಾರ್‌ಗಳನ್ನು, ಬಸ್ಸುಗಳನ್ನು ತರಿಸುವುದಕ್ಕೆ ಯೋಜನೆ ಇದೆ.

ಶ್ರೀ ಹೆಚ್.ಎನ್. ನಂಜೇಗೌಡ:- ಈಗ ಒಳ್ಳೆಯ ವಿದೇಶಿ ಕಾರ್‌ಗಳನ್ನು ಕೂಡ ಅಮದು ಮಾಡಿಕೊಳ್ಳುವುದಕ್ಕೆ ಅಗ್ರಿಮೆಂಟ್ ಇದೆ. ಆದರೆ ಈಗಾಗಲೇ ಒಪ್ಪಂದ ಆಗಿದೆ ಎಂದು ನಾನು ಹೇಳಲಿಲ್ಲ. ಬ್ರಿಟಿಷ್ ರಾಜಕುಮಾರ್ ಇಂಡಿಯಾ ದೇಶಕ್ಕೆ ಬಂದಿದ್ದಾಗ ಬೆಂಗಳೂರಿಗೆ ಬಂದಿದ್ದರು. ಆಗ ನಮ್ಮವರು ಮರ್ಸಿಡೀಸ್ ಕಾರ್ ತೆಗೆದುಕೊಂಡು ಹೋದರು. ಆದಕ್ಕೆ ಅವರು ಒಪ್ಪಲಿಲ್ಲ. ಇಂಡಿಯಾ ದೇಶದ ಅಥವಾ ಇಂಗ್ಲೆಂಡ್‌ನ ಕಾರೇ ಬೇಕು ಎಂದು ಹೇಳಿದರು. ಇದನ್ನು ಕೇಳಿದ್ದುದು ನಮ್ಮ ರಾಜ್ಯದಲ್ಲಿ ಪ್ರವಾಸ ಮಡುವುದಕ್ಕೆ. ಅದುದರಿಂದ ವಿದೇಶಿ ಕಾರ್‌ಗಳನ್ನು ತಯಾರು ಮಾಡುವಂಥ ಪ್ರಶ್ನೆ ನನಗೆ ಅರ್ಥವಾಗುತ್ತಿಲ್ಲ. ನಾವು ಪ್ರವಾಸೋದ್ಯಮದ ಬಗ್ಗೆ ಪ್ರಶ್ನೆ ಕೇಳಿದಾಗ ನಿಮ್ಮಿಂದ ಲಿಖಿತ ಉತ್ತರ ಬರಲಿಲ್ಲ. ಆದುದರಿಂದ ಈ ಪ್ರಶ್ನೆಯನ್ನು ತಡೆಹಿಡಿಯುವುದು ಕ್ಷೇಮ ಎಂದು ಅನ್ನಿಸುತ್ತದೆ. ಈಗ ನಾವು ಕೇಳುವುದೇನೆಂದರೆ ನೀವು ಏನು ಅಗ್ರಿಮೆಂಟ್ ಮಾಡಿಕೊಂಡಿದ್ದೀರಿ? ಅದರ ಆಗುಹೋಗುಗಳು ಏನು? resultant effects ಏನು? ಇದರ ಬಗ್ಗೆ ನಮಗೆ ಉತ್ತರ ಗೊತ್ತಾಗಬೇಡವೇ? ಸಡನ್ ಆಗಿ ಹೇಗೆ ಅರ್ಥಮಾಡಿಕೊಳ್ಳುವುದು? ನೀವೇ ವ್ಯಾಪಕವಾಗಿ ಹೇಳಿಬಿಟ್ಟರೆ ಒಳ್ಳೆಯದು. ಫಾರಿನ್ ಕಂಪನಿಯವರು ಇಲ್ಲಿಗೆ ಬಂದು ಹೋಟೆಲ್ ತೆಗೆಯುತ್ತಾರೆ ಎಂದರೆ ಅವರಿಗೆ ನೀವು ಏನೇನು ಪ್ರಿವಿಲೇಜ್ ಕೊಡುತ್ತೀರಿ? Suppose they are treated as a special citizens in our own country ಅವರಿಗೆ ಬೇರೆ ಸೌಲಭ್ಯಗಳನ್ನು, ಸವಲತ್ತುಗಳನ್ನು ಕೊಡುತ್ತೀರಾ?

ಶ್ರೀ ಜೆ.ಹೆಚ್. ಪಟೇಲ್ :- ನಾನು ಹೇಳುವಂಥ ಸವಲತ್ತುಗಳು ಇಲ್ಲಿಯ ಸಾಮಾನ್ಯ ಜನರಿಗೆ ಅನುಕೂಲವಾಗುವುದಿಲ್ಲ. ಇವುಗಳು 10 ಸಾವಿರ ಮೈಲಿಯಿಂದ ಬಂದು ಡೆಲ್ಲಿಯಲ್ಲಿ ಇಳಿದು ಇಲ್ಲಿರುವ ಪ್ರದೇಶಗಳನ್ನು ನೋಡಿಕೊಂಡು ವಾಪಸ್ಸು ಹೋಗುತ್ತಾರಲ್ಲ, ಅವರು ಹೆಚ್ಚು ದುಡ್ಡು ಖರ್ಚು ಮಾಡಲು ತಯಾರಿರುತ್ತಾರೆ. ಇವರುಗಳು ಇಂಥ ಪಂಚತಾರಾ ಹೋಟೆಲ್‌ಗಳಲ್ಲಿ ಇರುತ್ತಾರೆ. ಇಲ್ಲಿಗೆ ವಾಟಾಳ್ ನಾಗರಾಜ್‌ರವರ ಕ್ಷೇತ್ರದಿಂದಾಗಲೀ ಅಥವಾ ನನ್ನ ಕ್ಷೇತ್ರದಿಂದಾಗಲೀ ಯಾರು ಬರುತ್ತಾರೆ? ನಮ್ಮ ರಾಜ್ಯದವರು ತಿರುಪತಿಗೋ,

ಯಾವುದಾದರೂ ಗುಡ್ಡಕ್ಕೋ ಹೋಗಿ ದೇವರಿಗೆ ಕೈ ಮುಗಿದು ಬರುತ್ತಾರೆ.

Local .. domestic tourism It will not fetch you money

ಆದುದರಿಂದ ದುಡ್ಡು ತೆಗೆಸಬೇಕು ಎಂದರೆ ವಿದೇಶಿ ಜನರಿಂದ ಮಾತ್ರ ಮಾಡಬಹುದು. ನಾನು ಮಲೇಶಿಯಾಕ್ಕ ಹೋಗಿದ್ದಾಗ ಅಲ್ಲಿ ಬಾಹುಬಲಿ ಚಿತ್ರ ತೋರಿಸಿದರು. ನಮ್ಮಲ್ಲಿ 50-60 ಅಡಿ ಎತ್ತರದ ಪ್ರತಿಮೆಗಳು ಇರುವುದನ್ನು ಹೇಳಿದಾಗ ಅವರು ಆಶ್ಚರ್ಯ ಪಟ್ಟರು. ಇಂಥದ್ದು ನಿಮ್ಮಲ್ಲಿ ಇದೆಯೇ ಎಂದು ಕೇಳಿದರು. ಆದುದರಿಂದ ಇಲ್ಲಿಗೆ ಬರುವವರು ವಿಮಾನದಲ್ಲಿ ಬಂದು ಹೋಗುತ್ತಾರೆ. ಬೆಂಗಳೂರಿನಲ್ಲಿ ಏರ್ ಟ್ಯಾಕ್ಸಿ ಆರೆಂಜ್ ಮಾಡುವುದಾದರೆ ಹಾಸನ, ಬೇಲೂರು That is a different Matter. ಎಷ್ಟೋ ವಿದೇಶಿ ಜನರು ಜೋಗ್ ಜಲಪಾತ ನೋಡಿಲ್ಲ. ಇವರುಗಳು ಅದನ್ನು ನೋಡುವುದಕ್ಕೆ ಬರುತ್ತಾರೆ. ಹೆಚ್ಚು ದುಡ್ಡು ಖರ್ಚು ಮಾಡುತ್ತಾರೆ. ಸಿಂಗಾಪುರ ಒಂದು ಸಣ್ಣ ರಾಷ್ಟ್ರ ಆದರೆ ಅಲ್ಲಿ ಪ್ರವಾಸೋದ್ಯಮದಿಂದ ಬರುವ ಆದಾಯ 70 ಮಿಲಿಯನ್ ಡಾಲರ್‌ಗಳು. ನಮ್ಮಲ್ಲಿರತಕ್ಕಂಥ ಟೂರಿಸಮ್ ಪ್ರೊಜ್‌ಕ್ಟ್ ಡೆಸ್ಟಿನೇಷನ್ಸ್ ಏನಿದೆ ಎಂದು ಯಾರಿಗೂ ಗೊತ್ತಿಲ್ಲ. ಆದುದರಿಂದ ಹೆಚ್ಚು ಹಣ ಖರ್ಚು ಮಾಡುವವರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ನಾವು ಈ ರೀತಿಯ ವ್ಯವಸ್ಥೆ ಮಾಡುತ್ತಿದ್ದೇವೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ನಾವು ಏನನ್ನು ಕೇಳಿದರೂ ಸರ್ಕಾರ ಯಾವಾಗಲೂ ವಿದೇಶಿ ಕಡೆ ಕೈ ತೋರಿಸುತ್ತದೆ. ಕೆ.ಸಿ.ಪಿ.ಯಿಂದ ಒಂದು ಯೂನಿಟ್‌ಗೆ 80 ಪೈಸೆಯಿಂದ 1-10 ರವರೆಗೆ ಖರ್ಚಾಗುತ್ತದೆ ಎಂದು ಹೇಳುತ್ತಾರೆ. ಆದುದರಿಂದ ಆನ್ ಗೋಯಿಂಗ್ ವರ್ಕ್ಸ್‌ಗೆ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಲು ಯಾವಗಲೂ ಬೇರೆಯವರ ಮೇಲೆ ಡಿಪೆಂಡ್ ಆದರೆ ಹೇಗೆ ? ನಮಗೆ ಈಗ ಲಭ್ಯವಿರುವುದು 422 ಮೆಗಾವ್ಯಾಟ್ಸ್. ಆದರೆ ಬೇಡಿಕೆ ಇರುವಂಥದ್ದು 6 ಸಾವಿರ ಮೆಗಾವ್ಯಾಟ್ಸ್. ಅದಕ್ಕೆ ನೀವು ಏನು ಮಾಡುತ್ತೀರಿ? ಯಾವಾಗಲೂ ವಿದೇಶದ ಕಡೆ ಕೈ ತೋರಿಸುತ್ತಿದ್ದರೆ ಇನ್ನೂ 4-5 ವರ್ಷಗಳಾದರೂ ಈ ಕೆಲಸ ಆಗುವುದಿಲ್ಲ. ಈಗ ಆನ್ ಗೋಯಿಂಗ್ ಪ್ರಾಜೆಕ್ಟ್ ನಿಲ್ಲಿಸಿದ್ದೀರಾ?

**ಶ್ರೀ ಜೆ.ಹೆಚ್. ಪಟೇಲ್:-** ಆನ್ ಗೋಯಿಂಗ್ ವರ್ಕ್ಸ್ ಖಿದ್ರಾ ಮತ್ತು ಕೊಡಸಳ್ಳಿಯಲ್ಲಿ ಕೆಲಸ ನಡೆಯುತ್ತಿದೆ. ರಾಯಚೂರಿನಲ್ಲಿ ನಾಲ್ಕನೇ ಯುನಿಟ್. Raichur IV the Unit about to be commissioned.

ಆದರಲ್ಲಿ ಏನೋ ಡಿಫೆಕ್ಟ್ ಬಂದು ನಿಲ್ಲಿಸಿದ್ದಾರೆ. ಇನ್ನು ಎರಡು- ಮೂರು ತಿಂಗಳಲ್ಲಿ ಒಂದು ಜನರೇಟರ್ ಶುರುವಾಗುತ್ತದೆ.

+ **ಶ್ರೀ ಎಸ್.ಬಂಗಾರಪ್ಪ :-** ಮಾನ್ಯ ಸಭಾಧ್ಯಕ್ಷರೇ, Of Course, Two questions are clubbed together here. Karnataka Power Corporation

ಈ ವಿದ್ಯುತ್ ಉತ್ಪಾದನೆ ಬಗ್ಗೆ ವಾಟಾಳ್‌ರವರ ಪ್ರಶ್ನೆ ಏನಿದೆ ಎಂದರೆ ಇದಕ್ಕೆ ಸಂಬಂಧ ಪಟ್ಟ ಹಾಗೆ ವಿದೇಶಿ ಸಂಸ್ಥೆಗಳ ಜೊತೆಯಲ್ಲಿ ಒಪ್ಪಂಧದ ವಿಚಾರದಲ್ಲಿ ಕರ್ನಾಟಕ ಪವರ್ ಕಾರ್ಪೊರೇಷನ್‌ನಿಂದ ನಾವು ಎಂ.ಒ.ಯು. ರುಜು ಮಾಡತಕ್ಕ ಅವಶ್ಯಕತೆ ಏನಿತ್ತು ಎಂದು ಕೇಳಿದ್ದಾರೆ. ಎರಡು- ಮೂರು ಟೈಪ್‌ನಲ್ಲಿ ಅಂದರೆ ಅದು ಜಲ ವಿದ್ಯುತ್ ಯೋಜನೆ, ಥರ್ಮಲ್ ಇನ್ನೊಂದು ರಾಯಚೂರಿನಲ್ಲಿದೆ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದೇವೆ. ಅದನ್ನು ಮಾಡದೇ ಇದ್ದರೆ ಯಾವ ಪಕ್ಷದ ಸರ್ಕಾರ ಬಂದರೂ ಕೂಡ ಈ ಇಂಡಸ್ಟ್ರಿಯಲ್ ಸೆಕ್ಟರನ್ನೂ ಮತ್ತು ಅಗ್ರಿಕಲ್ಚರಲ್ ಸೆಕ್ಟರನ್ನು ಕವರ್ ಮಾಡುವುದಕ್ಕೆ ಎರಡು- ಮೂರು ಕೋಟಿ ಖರ್ಚಾಗುತ್ತಿತ್ತು. ಆದರೆ ಈಗ ನಾಲ್ಕು ಕೋಟಿ ರೂ ಆಗುತ್ತದೆ. ಈ ಹಣ ಎಲ್ಲಿಂದ ತರುತ್ತೀರಾ? ಕೆ.ಪಿ.ಸಿ.ಯಿಂದ ಮಾಡುವುದಕ್ಕೆ ಆಗುವುದಿಲ್ಲ. ಭಾರತ ಸರ್ಕಾರದ ಗೈಡ್ ಲೈನ್ಸ್ ಪ್ರಕಾರ ಅವರು ಎಂ.ಒ.ಯು. ಅಗ್ರಿಮೆಂಟ್ ಮಾಡಿಕೊಳ್ಳಿ ಎಂದು ಹೇಳಿದರು. ನನ್ನ ಕಾಲದಲ್ಲಿ 7-8 ಎಂ.ಒ.ಯು. ಮಾಡಿರಬಹುದು. If I remember correct, subject to verification.

ಅಮೇರಿಕದಲ್ಲಿ ರುಜು ಮಾಡತಕ್ಕ ಸಂದರ್ಭದಲ್ಲಿ I led an official delegation top U.S.A. We signed about 5-6 MOUs adn selected one in England. Total 9-10 Cogentrix that is an American Company, If I remember correctly. One we got through with agreement. State Government on one side and on the other side Cogentrix of USA.

ನನ್ನ ಪ್ರಶ್ನೆ ಇಷ್ಟೆ. ಇವೊತ್ತು ಕೊಜೆಂಟ್ರಿಕ್ಸ್ ಕಂಪನಿಯವರ ಜೊತೆ ಯಾವ ರೀತಿ ರುಜು ಮಾಡಿದ್ದೀರೋ ಅದರ ಟರ್ಮ್ಸ್ ಅಂಡ್ ಕಂಡೀಶನ್ಸ್ ನೋಡಿಕೊಂಡು ರುಜು ಮಾಡಬೇಕು total cost of generating power per MW

ವರ್ಷದಿಂದ ವರ್ಷಕ್ಕೆ escalate ಆಗುತ್ತಾ ಹೋಗುತ್ತದೆ. you please speed up the thing. Industrial sector growth rate has come down ಅಗ್ರಿಕಲ್ಚರಲ್ ಸೆಕ್ಟರ್‌ಗೆ ಫ್ರೀಯಾಗಿ ವಿದ್ಯುತ್ ಕೊಡುವುದು, ಬಿಡುವುದು ಅದು ನಿಮಗೆ ಬಿಟ್ಟ ವಿಚಾರ. ಇದರ ಬಗ್ಗೆ ಮಾನ್ಯ ಸಭಾಧ್ಯಕ್ಷರು ಸೆಪರೇಟ್ ಆಗಿ ಚರ್ಚೆಗೆ ತೆಗೆದುಕೊಳ್ಳುವುದು ಅವರಿಗೆ ಬಿಟ್ಟಿದ್ದು I am holding one view and your are holding a different view..

ಎಲ್ಲಾ ಪಕ್ಷದ ಸದಸ್ಯರು ಇದರ ಬಗ್ಗೆ ಮಾತನಾಡಬೇಕು ಎಂದು ಹೇಳಿದ್ದಾರೆ. ಕೊಜೆಂಟ್ರಿಕ್ಸ್ ಕಂಪನಿಯಲ್ಲಿ ನೀವು ಏನು ಅಗ್ರಿಮೆಂಟ್ ಮಾಡಿಕೊಂಡಿದ್ದೀರಿ ಅದರಲ್ಲಿ ಏನು ಪ್ರಾಬ್ಲಮ್ ಇದೆ ಗೊತ್ತೇನು? Something will have to be cleared by the Govt. of India, becase power selling terms and conditions rates..

ಮಾಡಿದ್ದಂಥದ್ದು ಏನಿದೆ, ಅದನ್ನು ಗೌರ್ನಮೆಂಟ್ ಒಪ್ಪದೇ ಇದ್ದರೆ ಇದೆಲ್ಲಾ ಬರುವುದಿಲ್ಲ, ಅವರು ಇಟ್ಟುಕೊಂಡು ಕೊಳಿತಿದ್ದಾರೆ. ಕೊಜೆಂಟ್ರಿಕ್ಸ್ ಕಂಪನಿ ಬಗ್ಗೆ It has not come through - though you have signed the agreement. MOU is the first stage; second stage is agreement..... ಆದರೂ ಕೂಡ samething will have to be cleared by Govt. of India. The specific question... ಕೊಜೆಂಟ್ರಿಕ್ಸ್ ಕಂಪನಿ ಸಾವಿರ ಮೇಗಾವ್ಯಾಟ್ ಪವರನ್ನು ಜಾಸ್ತಿ ಉತ್ಪಾದಿಸುತ್ತದೆ. ಆದರೆ, ಕೇಂದ್ರದಿಂದ ಬರದೇ ಕೆಲಸ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. Almatti Dam earth excavation Shivana samudra, Thoranagal in Bellary, Next stag in Raichur ಇವೆಲ್ಲಾ ನನ್ನ ಕಾಲದಲ್ಲಿ ಕರ್ನಾಟಕ ರಾಜ್ಯದ ವಿವಿಧ ಭಾಗಗಳಲ್ಲಿ ಪ್ರಾರಂಭಿಸಲಾಗಿದೆ. ಇವುಗಳನ್ನೆಲ್ಲಾ ಮುಂದುವರೆಸಿಕೊಂಡು ಹೋಗಬೇಕು. You will have to exert more pressure on Govt. of India and get clearance about this Cogentrix.

ಉಳಿದಿರತಕ್ಕ ಯಾವ ಯಾವ ಕಂಪನಿಗಳಿಗೆ ಅಗ್ರಿಮೆಂಟ್ ಮಾಡಿಕೊಳ್ಳಬೇಕೋ, ಅವುಗಳಿಗೆ ತುರ್ತಾಗಿ ಅಗ್ರಿಮೆಂಟ್ ಮಾಡಿಕೊಂಡು ಹೋಗಿ. ಹೌದು, ಪರ್ ಯುನಿಟ್ ಸೆಲ್ಲಿಂಗ್ ಕಾಸ್ಟ್ ಜಾಸ್ತಿಯಾಗುತ್ತದೆ. I am sorry, I am taking much of the time cutting the time of other hon'ble members. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೆಚ್ಚಿಗೆ ಟೈಂ ಬೇಕಾಗುತ್ತದೆ. ಮಾನ್ಯ ಸದಸ್ಯರು ಕೂಡ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ರೆಡಿ ಇದ್ದಾರೆ. I have lot of information about each subject. ವಿಷಯವಾರು ಮಾತಾನಾಡುವುದಕ್ಕೆ ಟೈಂ ಸಾಕಾಗುವುದಿಲ್ಲ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ:-** ಕೊಜೆಂಟ್ರಿಕ್ಸ್ ಕಂಪನಿಗೆ ಲಾಭದಲ್ಲಿ ಎಷ್ಟು ಪರ್ಸೆಂಟ್‌ಗೆ ಅಸ್ಯೂರೆನ್ಸ್ ಮಾಡಿದ್ದಿರಿ? ಎನ್ರೊನ್ ಕಂಪನಿಗೆ ಮಹರಾಷ್ಟ್ರದವರು ಶೇಕಡ 16ರಷ್ಟು ಲಾಭದ ಭರವಸೆಯನ್ನು ಮಾಡಿದ್ದರು. ಪ್ಲಾನಿಂಗ್ ಕಮಿಷನ್ ಲೆಕ್ಕದ ಪ್ರಕಾರ ರೂ. 4.60 ಕಾಸ್ಟ್ ಒಂದು ಯುನಿಟ್‌ಗೆ ಆಗುತ್ತದೆ. ಅಷ್ಟೆ ಮಾಡಿಕೊಂಡಿದ್ದೀರೋ ಅದಕ್ಕಿಂತ ಜಾಸ್ತಿ ಮಾಡಿಕೊಂಡಿದ್ದೀರೋ? ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಶೇಕಡ 22ರಷ್ಟು ಕೊಜೆಂಟ್ರಿಕ್ಸ್ ಕಂಪನಿಯವರು ಕೇಳಿದ್ದಾರೆ. ಸರ್ಕಾರ ಒಪ್ಪಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಪ್ಲಾನಿಂಗ್ ಕಮಿಷನ್ ಲೆಕ್ಕದ ಪ್ರಕಾರ ರೂ. 7.20 ಪರ್ ಯೂನಿಟ್‌ಗೆ ಆಗುತ್ತದೆ. ಇದನ್ನು ಇಂಡಸ್ಟ್ರೀಯಲ್ ಸೆಕ್ಟಾರ್‌ಗ ಕೊಡುತ್ತೀರೋ, ಅಗ್ರಿಕಲ್ಚರ್ ಸೆಕ್ಟಾರ್‌ಗೆ ಕೊಡುತ್ತೀರೋ? ನಾನು ಪತ್ರಿಕೆಯಲ್ಲಿ ಓದಿದ್ದು, ಹೈ ರೇಟ ಪವರ್ ಇಂಡಸ್ಟ್ರೀಲ್ ಸೆಕ್ಟಾರ್‌ಗೆ ಕೊಡುತ್ತೀರಿ ಎಂದು the ultimate victim will be the common man. ಇದರ ಬಗ್ಗೆ ತಾವು ಉತ್ತರ ಕೊಡಬೇಕು.

**ಶ್ರೀ ಜೆ.ಹೆಚ್. ಪಟೇಲ್:-** ಮಾನ್ಯ ಬಂಗಾರಪ್ಪನವರು ಅತ್ಯಂತ ಉಪಯುಕ್ತವಾದ ಸಲಹೆ ಕೊಟ್ಟಿದ್ದಾರೆ. That we should not waste time, we should go

ahead. ಕೊಜೆಂಟ್ರಿಕ್ಸ್ ಕಂಪನಿಯೊಂದಿಗೆ ಅಗ್ರಿಮೆಂಟ್ ಮಾಡಿಕೊಂಡಿದ್ದೇವೆ. ಉಳಿದವುಗಳ ಟೈಂ ಎಕ್ಸ್‌ಪೈರ್ ಆಗಿದೆ. 3-4 ಕಂಪನಿಗಳಿಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದಿಂದ ತಡವಾಗಿದೆ. ಇದಕ್ಕೆ ಕಾರಣ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳ ಹತ್ತಿರ ಮಾತನಾಡಿ, ಅದಷ್ಟು ಬೇಗನೆ ಕ್ಲಿಯರ್ ಮಾಡಿ ಕಳುಹಿಸುವಂತೆ ಕೇಳಿಕೊಂಡಿದ್ದಾರೆ. ಅದಕ್ಕೆ ಪ್ರಧಾನಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ಇದು ಕೇಂದ್ರ ಸರ್ಕಾರದ ಮೇಲೆ ಅವಲಂಭಿಸಿದೆ, ನಮ್ಮ ಯೋಜನೆಗಳನ್ನು ನಾವು ಮಾಡುತ್ತಿದ್ದೇವೆ. ಇಂಪಾರ್ಟೆಂಟ್ ಎಲಿಮೆಂಟ್ಸ್, ಕೇಂದ್ರ ಸರ್ಕಾರದ್ದು ಇದ್ದರೆ, ಅವರೇ ಕ್ಲಿಯರ್ ಮಾಡುತ್ತಾರೆ. ಕೌಂಟರ್ ಗ್ಯಾರೆಂಟಿ ಕೊಡುವ ಬಗ್ಗೆ ನಾವು ಅಸ್ಯೂರ್ ಮಾಡುವುದಿಲ್ಲ. ಕೆ.ಇ.ಬಿ. ಅಥವಾ ಸ್ಟೇಟ್ ಗೌರ್ನಮೆಂಟ್ ಆದರೆ ನಾವು ಕೊಡಬಹುದು.

**Sri S. Bangarappa:-** I am sorry, I don't want to interfere again. ಕೊಜೆಂಟ್ರಿಕ್ಸ್ ಕಂಪನಿಗೆ ಗ್ಯಾರೆಂಟಿ ಕೊಡುವುದಕ್ಕೆ ಕೆ.ಇ.ಬಿ. ಮುಖಾಂತರ ಒಪ್ಪಿದ್ದೀರಿ. ಅವರು ಗೌರ್ನಮೆಂಟ್ ಆಫ್ ಇಂಡಿಯಾ ಗ್ಯಾರೆಂಟಿ ಕೊಡಿ, ಸ್ಟೇಟ್ ಗೌರ್ನಮೆಂಟ್ ಗ್ಯಾರೆಂಟಿ ಕೊಡಿ, ಬ್ಯಾಂಕ್ ಗ್ಯಾರೆಂಟಿ ಕೊಡಿ, ರಿಸರ್ವ ಬ್ಯಾಂಕ್ ಗ್ಯಾರಂಟಿ ಕೊಡಿ ಎಂದು ಕೇಳುತ್ತಿದ್ದಾರೆ. ಅದಕ್ಕೆ ನೀವು ಒಪ್ಪುತ್ತಿಲ್ಲ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಇದರ ಬಗ್ಗೆ ನೀವು ಯಾವ ನಿಲುವು ತೆಗೆದುಕೊಂಡಿದ್ದೀರಿ.

**ಶ್ರೀ ಜೆ.ಹೆಚ್. ಪಟೇಲ್:-** ಕೌಂಟರ್ ಗ್ಯಾರೆಂಟಿ ಕೇಳುವವರನ್ನು ನಮ್ಮ ಮುಂದೆ ಇಟ್ಟು ಕೊಂಡಿಲ್ಲ ಕೊಜೆಂಟ್ರಿಕ್ಸ್ ಕಂಪನಿಯವರು ಕೇಂದ್ರ ಸರ್ಕಾರದ ಗ್ಯಾರೆಂಟಿ ತೆಗೆದುಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಬರುವ ಕಂಪನಿಗಳು ಕೇಂದ್ರದಿಂದ ಪರ್ಮಿಷನ್ ತೆಗೆದುಕೊಂಡು ಬರಲಿ.

**ಅಧ್ಯಕ್ಷರು:-** ಮಾನ್ಯ ಶಿವರಾಮರೆಡ್ಡಿಯವರು ಕೊಜೆಂಟ್ರಿಕ್ಸ್ economics work out ಒಂದು ಯುನಿಟ್‌ಗೆ ರೂ. 7.20 ಆಗುತ್ತದೆ, ಇಂಡಸ್ಟ್ರೀಯಲ್ ಸೆಕ್ಟಾರ್ ಆರ್ ಅಗ್ರೆರಿಯನ್ ಸೆಕ್ಟಾರ್‌ಗೆ ಕೊಟ್ಟರೂ ultimately common man will be affected ಎಂದು ಹೇಳಿದ್ದಾರೆ.

**ಶ್ರೀ ಜೆ.ಹೆಚ್. ಪಟೇಲ್ :-** ನಮ್ಮದೇ ಆದ ಪವರ್ ಜನರೇಟಿಂಗ್ ವ್ಯವಸ್ಥೆ ಇದೆ; ಹೈಡಲ್, ಥರ್ಮಲ್, ಆಟಾಮಿಕ್... ಮಾನ್ಯ ಸದಸ್ಯರ ಅನುಮಾನ ಏನಿದೆ,..... high cost power industry, low cost agriculture ಇದು ಆಗುವುದಿಲ್ಲ We will have a rationalised structure.

**ಶ್ರೀ ವಾಟಾಳ್ ನಾಗರಾಜ್:-** ವಿದೇಶಿ ಕಂಪನಿಗಳಿಗೆ ಕೇಂದ್ರ ಸರ್ಕಾರ ಅನುಮತಿ ಕೊಡುವುದು ಒಂದು ಕಡೆಯ ವಿಚಾರ. ನಮ್ಮದೇ ಆದಂಥ ಯೋಜನೆಗಳಿಗೆ ಇದುವರೆಗೆ ಏತಕ್ಕೆ ಅನುಮತಿ ಕೊಟ್ಟಿಲ್ಲ? ಎಷ್ಟು ವರ್ಷದಿಂದ ನಮ್ಮ ಯೋಜನೆಗಳು ಕೇಂದ್ರದಲ್ಲಿ ಬಾಕಿ

ಉಳಿದಿವೆ. ಇದರ ಬಗ್ಗೆ ನಿಮ್ಮ ನಿಲುವು ಏನು? ಮಾನ್ಯ ಮುಖ್ಯಮಂತ್ರಿಗಳು ಸಂಘರ್ಷಕ್ಕಾದರೂ ಸಿದ್ಧ ಎನ್ನುವ ಭಾಷೆಯನ್ನು ಬಳಸಿದ್ದಾರೆ. ಈ ಬಗ್ಗೆ ಏನು ಹೇಳುತ್ತೀರಿ?

**ಶ್ರೀ ಜೆ.ಹೆಚ್. ಪಟೇಲ್:-** ಯೋಜನೆಗಳು ಬಹಳ ಇವೆ. ವ್ಯಾಪ್ತಿ ಬಹಳ ಆಯಿತು.

**ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ ದಿನಾಂಕ: 27-3-95 ರಂದು ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತಮೂಲಕ ಉತ್ತರಿಸುವ 5ನೇ ಪಟ್ಟಿಯಲ್ಲಿರುವ 87 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

## ವಿಷಯ :- ವಿದ್ಯುತ್ ಸಂಪರ್ಕ ನೀಡುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 101 (417)
ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು)

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಮನೆಗಳಿಗೆ ಗೃಹಬಳಕೆಗಾಗಿ ಕೊಡುವ ವಿದ್ಯುತ್ ಜೋಡಣೆಯ ಸಂಪರ್ಕವನ್ನು ತೋರಿರುವ ಅರ್ಜಿಗಳಿಗೆ ನ್ಯಾಯಾಂಗದ ಆಕ್ಷೇಪ ಬಿಟ್ಟು ಬೇರೆ ಯಾರ ಆಕ್ಷೇಪ ಇದ್ದರೂ ಕಡ್ಡಾಯವಾಗಿ ಜೋಡಣೆ ಕೊಡಬೇಕೆಂದು ಕೆ.ಇ.ಬಿ. ಅಧಿಕಾರಿಗಳಿಗೆ ಆಜ್ಞೆಕೊಡಲು ಸರ್ಕಾರ ಬದ್ಧವಾಗಿದೆಯೇ?

**ಶ್ರೀ ಜೆ.ಹೆಚ್. ಪಟೇಲ್**
**(ಉಪ ಮುಖ್ಯಮಂತ್ರಿಗಳು)**

ಅ) ಗೃಹ ಬಳಕೆಗಾಗಿ ವಿದ್ಯುತ್ ಸಂಪರ್ಕವನ್ನು ಮಂಡಳಿಯು ಅರ್ಜಿದಾರರುಗಳಿಗೆ ನೀಡಬೇಕಾದರೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ವಿದ್ಯುತ್ ಸರಬರಾಜು ನಿಬಂಧನೆಗಳು 1988ರಲ್ಲಿ ತಿಳಿಸಿರುವ ಷರತ್ತುಗಳನ್ನು ಪಾಲಿಸಲೇಬೇಕು ಮತ್ತು ಅಗತ್ಯವಿರುವ ದಾಖಲೆಗಳನ್ನು ನೀಡಲೇಬೇಕಾಗುತ್ತದೆ. ಅರ್ಜಿದಾರನು ಸಂಬಂಧಿಸಿದ ಅಧಿಕಾರ ವರ್ಗದಿಂದ ನಿರಾಕ್ಷೇಪಣಾ ಪತ್ರ ಅಥವಾ ಮಂಜೂರಾದ ನಕ್ಷೆಯನ್ನು ಅರ್ಜಿಯ ಜೊತೆಗೆ ಮಂಡಳಿಗೆ ಸಲ್ಲಿಸಬೇಕಾಗಿದೆ. ಅಲ್ಲದೇ, ಮಂಡಳಿಯ ವಿದ್ಯುತ್ ಸರಬರಾಜು ನಿಬಂಧನೆಗಳು 1988ರ ಪ್ರಕಾರ ವಿದ್ಯುತ್ ಕೋರಿದ ಅರ್ಜಿದಾರನ ಮನೆಗೆ ಎಳೆಯುವ ಸರ್ವೀಸ್ ಲೈನು